# ಚಿತ್ರದುರ್ಗದ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ
## ಸ್ಪೆಷಲ್ ಕೇಸ್(ಪಿ.ಸಿ) ಸಂಖ್ಯೆ: 06/2016

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ತಿಪ್ಪೇಸ್ವಾಮಿ | **ಪಿಡಬ್ಲ್ಯೂ.21** |
| **ತಂದೆಯ ಹೆಸರು** | : | ಟಿ.ಪಾಲಯ್ಯ | **ಸಿಡಬ್ಲ್ಯೂ.45** |
| **ವಯಸ್ಸು** | : | **58 ವರ್ಷ** | **ಪ್ರಮಾಣ ವಚನ ಬೋಧಿಸಿದ** |
| **ಉದ್ಯೋಗ** | : | ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ , ಕೂಡ್ಲಿಗಿ , ಬಳ್ಳಾರಿ ಜಿಲ್ಲೆ | **ದಿನಾಂಕಃ 07.02.2019.** |
| **ವಾಸಸ್ಥಳ** | : | ಕೂಡ್ಲಿಗಿ | |

## ಎಸ್‌ಪಿಪಿ ರವರಿಂದಃ ಮುಖ್ಯ ವಿಚಾರಣೆಃ

2013 ರಿಂದ 2016 ರವರೆಗೆ ನಾನು ಹಿರಿಯೂರು ಉಪ ವಿಭಾಗದಲ್ಲಿ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಅಂತ ಕರ್ತವ್ಯ ನಿರ್ವಹಿಸಿರುತ್ತೇನೆ . ಆ ಸಮಯದಲ್ಲಿ ದಿಃ 11.06.2014 ರಂದು ಚಿತ್ರದುರ್ಗ ಲೋಕಾಯುಕ್ತ ಪೊಲೀಸರು ನಮ್ಮ ಕಛೇರಿಗೆ ಪತ್ರ ಬರೆದು ಹಿರಿಯೂರು ತಾಲ್ಲೂಕು ಹೂವಿನಹೊಳೆ ಸರ್ವೆ ನಂ 62/2 ರಲ್ಲಿ ತೆಂಗು ಬೆಳೆ , ಸಿಲ್ವರ್ ಇತ್ಯಾದಿ ಗಿಡ ಬೆಳೆಸಿದ ಬಗ್ಗೆ , ಗುಂಡಿ ತೋಡಲು ಖರ್ಚು ಮಾಡಿದ ಬಗ್ಗೆ ವಿವರ ಕೇಳಿದ್ದರು . ಆ ಪತ್ರವನ್ನು ನಿಪಿ-42 ಅಂತ ಗುರುತಿಸಲಾಯಿತು . ಆ ಪ್ರಕಾರ ನಾನು ವಲಯ ಅರಣ್ಯಾಧಿಕಾರಿ ಸುರೇಶ್ ಇವರಿಗೆ ವಿಚಾರ ಮಾಡಿ ವರದಿ ಕೊಡಲು ತಿಳಿಸಿದ್ದೆ . ಆ ಪ್ರಕಾರ ಸುರೇಶ , ವಲಯ , ಅರಣ್ಯಾಧಿಕಾರಿ (ಆರ್.ಎಫ್.ಒ) ಇವರು ವರದಿ ಮತ್ತು ಎಸ್ಟಿಮೇಟ್ ತಯಾರು ಮಾಡಿಕೊಟ್ಟಿರುತ್ತಾರೆ . ಅದನ್ನು ನಿಪಿ-43 ಅಂತ ಗುರುತಿಸಲಾಯಿತು . ಎಸ್ಟಿಮೇಟ್ ನ್ನು ನಿಪಿ-44 ಅಂತ ಗುರುತಿಸಲಾಯಿತು . ಸದರಿ ವರದಿ ಮತ್ತು ಎಸ್ಟಿಮೇಟ್ ಸರಿ ಇರುತ್ತದೆ . ಆ ವರದಿ ಪ್ರಕಾರ ಆರೋಪಿ ಜಮೀನಿನಲ್ಲಿ ಸಸಿ ಬೆಳೆಸಲು – ನರ್ಸರಿ ಮಾಡಲು ರೂ.1610/- ಖರ್ಚು ಮಾಡಿದ್ದಾರೆ .

**ಆರೋಪಿತರ ಪರ ಶ್ರೀ ಎಸ್.ಪಿ.ಹೆಚ್. ವಕೀಲರಿಂದಃ ಪಾಟೀ ಸವಾಲುಃ**

2. ಸರ್ವೆ ನಂ 62/2 ನೇದಕ್ಕೆ ನಾನು ಸ್ವತಃ ಭೇಟಿ ಕೊಟ್ಟಿಲ್ಲ . ಅಲ್ಲಿ ಯಾವ ಯಾವ ಜಾತಿ ಮರ ಬೆಳೆದಿದ್ದಾರೆ ಅಂತ ನಾನು ಖುದ್ದಾಗಿ ಪರಿಶೀಲಿಸಿಲ್ಲ . ಸುರೇಶ , ಆರ್.ಎಫ್.ಒ. ಕೊಟ್ಟ ವರದಿ ಮತ್ತು ಎಸ್ಟಿಮೇಟ್ ಪ್ರಕಾರ ನಾನು ಲೋಕಾಯುಕ್ತ ಪೊಲೀಸರಿಗೆ ಕಳುಹಿಸಿಕೊಟ್ಟಿದ್ದೇನೆ . ಕೆಲವು ಸಾರಿ ರೈತರು ತಮ್ಮ ಜಮೀನಿನಲ್ಲಿ ತಾವೇ ಸ್ವತಃ ಟ್ರಂಚ್ ಮಾಡಿ , ಕೊಟ್ಟಿಗೆ ಗೊಬ್ಬರ ಹಾಕಿ , ನೀರು ಹಾಕಿ ತಾವೇ ಸಸಿ ಬೆಳೆಸುತ್ತಾರೆ ಎನ್ನುವುದು ನಿಜ . ಈ ರೀತಿ ರೈತರು ತಾವೇ ಸ್ವತಃ ಮರದ ಕೆಳಗೆ ಸಸಿ ನರ್ಸರಿ ಮಾಡಿದಾಗ ಹಣ ಖರ್ಚಾಗುವುದಿಲ್ಲ ಎನ್ನುವುದು ನಿಜ .

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

(ಎಸ್.ಬಿ. ವಸ್ತ್ರಮಠ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿತ್ರದುರ್ಗ.